PCR 7/2024
PW.1

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ನಿತೇಶ್ ಶ್ಯಾಮ್ ಕಿತ್ತೂರ |
| ಗಂಡನ ಹೆಸರು | : ಶ್ರೀ. ಶ್ಯಾಮ್ ಕಿತ್ತೂರ |
| ವಯಸ್ಸು | : 30 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸ್ತವ್ಯ | : ವೈಭವ ನಗರ, ಬೆಳಗಾವಿ |
| ದಿನಾಂಕ | : 20-11-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಕಲಂ 200 ಸಿ.ಆರ.ಪಿ.ಸಿ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

ನಾನು 2023 ರಿಂದ ಜುಲೈ 2024ರವರೆಗೆ ನಾನು ಬಸ್ತವಾಡ ಗ್ರಾಮದಲ್ಲಿರುವಂತ ಬಳ್ಳುಳ್ಳಿ ಪೆಟ್ರೋಲ್ ಪಂಪಿನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ಸದರಿ ಪೆಟ್ರೋಲ್ ಪಂಪಿನ ಮಾಲೀಕರು ಅಪ್ಪಾಸಾಬ ಬಳ್ಳುಳ್ಳಿ ಆಗಿದ್ದು ಅದರ ಪಾಲುದಾರರಾಗಿ ಶೀತಲ್, ದೇವಕಿ ಹಾಗೂ ಪ್ರವೀಣ ಮುಕುಂದ ಕಂಗ್ರಾಳಕರ್ ಇದ್ದರು. ನನ್ನದು ಹಿಂದೂ ಬೋವಿ ಜಾತಿಯಾಗಿರುತ್ತದೆ.

2. ದಿಃ06.06.2024 ರಂದು ಬೆಳಿಗ್ಗ 10.00ಘಂಟೆಗೆ ಸುಮಾರಿಗೆ ಕೆಲಸ ಮಾಡಲು ಮೇಲೆ ಹೇಳಿದ ಪೆಟ್ರೋಲ್ ಪಂಪಿಗೆ ಹೋಗಿದ್ದು, ಆ ದಿನ ಪೆಟ್ರೋಲ್ ಹಾಕುವ ಕೆಲಸ ಮಾಡುವ ಸಿಬ್ಬಂದಿಯಾದಂತಹ ಕೃಷ್ಣಾ ಫಿರೋಜಿ ಮರಗನಾಚೆ, ಆಕಾಶ ಮುಗದ್ಯೆನವರ, ಸದಾಶಿವ ಆನಂದ ಪಾಟೀಲ್ ಮತ್ತು ಮಹಾಂತೇಶ ಮಾದಿಗರ ಬಂದಿದ್ದರು. ನಾನು ಸದರಿ ಪೆಟ್ರೋಲ್ ಪಂಪ್ ಕಛೇರಿಗೆ ಬರುವ ಮುಂಚೆ ಶೀತಲ್, ದೇವಕಿ ಮತ್ತು ಪ್ರವೀಣ ಕಂಗ್ರಾಳಕರ ಅವರು ಆ ದಿನ ಬೆಳಿಗ್ಗ 09.45 ಘಂಟೆಗೆ ಪೆಟ್ರೋಲ್ ಪಂಪ್ ಹತ್ತಿರ ಬಂದಿದ್ದು, ನಾನು ಬಂದ ತಕ್ಷಣ ಸದರಿ ಇಬ್ಬರು ನನಗೆ ನೀನು 3000/- ಹಣ ಕೊಡುವಂತೆ ಕೇಳಿದ್ದು, ಆಗ ನಾನು ಅಬವರಿಬ್ಬಗೆ ನಿಮಗೆ 3000/- ಹಣ ನಗದು ಕೊಡಲು ಬರುವುದಿಲ್ಲ, ಹಣವನ್ನು ಬ್ಯಾಂಕಿಗೆ ತುಂಬಬೇಕಾಗುತ್ತದೆ ಮತ್ತು ಚೆಕ್ ಮುಖಾಂತರ ಹಣ ನೀಡಬೇಕಾಗುತ್ತದೆ ಎಂದು ಹೇಳಿರುತ್ತೇನೆ.

ಆ ದಿನ ಅಲ್ಲಿಯೇ ನಮ್ಮ ಸಿಬ್ಬಂದಿಯಾದಂತಹ ಕೃಷ್ಣಾ ಫಿರೋಜಿ ಮರಗನಾಚೆ ಇದ್ದರು. ಸದರಿಯವರು ಅಲ್ಲೇ ಪೆಟ್ರೋಲ್ ಪಂಪಿನ ಕಛೇರಿಯಲ್ಲಿದ್ದಂತಹ ಕಬರ್ಡನ್ನು ತೆಗೆದು 20,000/- ನಗದು ಹಣವನ್ನು ಶೀತಲ್, ದೇವಕಿ ಮತ್ತು ಪ್ರವೀಣ ಕಂಗ್ರಾಳಕರ್ ಅವರಿಗೆ ನೀಡಿರುತ್ತಾರೆ. ಅದೇ ರೀತಿ ನಮ್ಮ ಇನ್ನೊಬ್ಬ ಸಿಬ್ಬಂದಿಯಾದಂತಹ ಆಕಾಶ ಮುಗದ್ಯೆನವರ ಕಡೆಯಿಂದ 10,000/- ನಗದು ಹಣವನ್ನು ಇಸಿದುಕೊಂಡರು. ನಂತರ ಮೇಲೆ ಹೇಳಿದ ಇಬ್ಬರು ಹೋಗುವಾಗ ನನಗೆ ನೀನು ನಮ್ಮ ಮಾತು ಕೇಳುತ್ತಿಲ್ಲ ಅಂತಾ ಹೇಳಿ ನನ್ನನ್ನು ದೂಕಿಸಿ ಕೊಟ್ಟು, ಈ ಹೊಲೆಯ ಸೂಳೆಮಗನಿಗೆ ಬಾಳ ಸೊಕ್ಕ ಬಂದಿದೆ ಒಂದು ಕೈ ನೋಡುಕೋಳುತ್ತೇವೆ ಅಂತಾ ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿ ಹೋದರು.

3. ದಿನಾಂಕಃ11.06.2024ರಂದು ಮೇಲೆ ಹೇಳಿದ ಇಬ್ಬರ ವಿರುದ್ದ. ದೂರು ಕೊಡಲು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ಹವಾಲ್ದಾರ ಇದ್ದು ಅವರಿಗೆ ನಾವು ದೂರು ಕೊಡಬೇಕೆಂದು ಹೇಳಿದ್ದು, ಆಗ ಸದರಿಯವರು ನಮಗೆ ಈ ದಿನ ಸಿ.ಪಿ.ಐ ರವರು ಠಾಣೆಯಲ್ಲಿ ಇರುವುದಿಲ್ಲ ನೀವು ನಾಳೆ ಬಂದು ದೂರು ಕೊಡಬಹುದು ಎಂದು ಹೇಳಿದ್ದು, ಆದ ಕಾರಣ ನಾನು ಅಲ್ಲಿಂದ ವಾಪಸ್ ನಮ್ಮ ಊರಿಗೆ ಬಂದಿರುತ್ತೇನೆ.

4. ದಿನಾಂಕಃ12.06.2024ರಂದು ದೂರು ಕೊಡಲು ಹಿರೇಬಾಗೇವಾಡಿ ಪೊಲೀಸ್ ಠಾಣೆಗೆ ಹೋಗಿದ್ದು, ಆ ದಿನ ಪೊಲೀಸರು ನನ್ನ ದೂರನ್ನು ಸ್ವೀಕರಿಸದೇ ನನಗೆ ಹೇಳಿದ್ದೇನೆಂದರೆ ನಾವು ನಿನಗೆ 15.06.2024 ರಂದು ಫೋನ್ ಕರೆ ಮಾಡುವುದಾಗಿ ಹೇಳಿ ಕಳುಹಿಸಿದ್ದು, ಅದರಂತೆ ನಾನು ಅಲ್ಲಿಂದ ವಾಪಸ್ ಬಂದಿರುತ್ತೇನೆ. ದಿನಾಂಕಃ15.06.2024ರಂದು ಹಿರೇಬಾಗೇವಾಡಿ ಠಾಣೆಯಿಂದ ಹವಾಲ್ದಾರರೊಬ್ಬರು ಕರೆ ಮಾಡಿ ಠಾಣೆಗೆ ಬರಲು ಹೇಳಿದ್ದು, ನಾನು ಠಾಣೆಗೆ ಹೋಗುವ ಮುಂಚೆ ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳನ್ನು ಅದಾಗಲೇ ಕರೆಯಿಸಿ ಸಿ.ಪಿ.ಐ ರವರು ವಿಚಾರಣೆ ಮಾಡಿದ್ದು ನನಗೆ ತಿಳಿದು ಬಂತು. ನಾನು ಠಾಣೆಗೆ ಹೋದಾಗ ಠಾಣಾ ಕಛೇರಿಯಲ್ಲಿ ಸಿ.ಪಿ.ಐರವರು ಹಾಗೂ ಶೀತಲ್, ಅರ್ಜುನ, ದೇವಕಿ ರವರು ಹಾಜರಿದ್ದರು. ಆಗ ಸಿ.ಪಿ.ಐರವರಿಗೆ ಶೀತಲ್ ದೇವಕಿ ಅವರು ಹಾಗೂ ಪ್ರವೀಣ ಕಂಗ್ರಾಳಕರ್ ಅವರು ನನಗೆ ಜೀವ ಬೆದರಿಕೆ ಹಾಕಿ ಅವಾಚ್ಯ ಶಬ್ದರಿಗಳಿಂದ ಬೈದು, ಜಾತಿ ನಿಂದನೆ ಮಾಡಿರುತ್ತಾರೆ ಆದ ಕಾರಣ ಅವರಿಬ್ಬರ ವಿರುದ್ಧ ದೂರು ದಾಖಲು ಮಾಡಿಕೊಳ್ಳಿ ಎಂದು ಕೇಳಿರುತ್ತೇನೆ.

5. ಆ ದಿನ ಸಿ.ಪಿ.ಐ ರವರು ನನ್ನ ಮತ್ತು ಶೀತಲ್ ಅರ್ಜುನ ದೇವಕಿ ಹತ್ತಿರ ಮಾತನಾಡಿದ್ದು ಆಗ ಸಿ.ಪಿ.ಐರವರು ಇದು ಪೆಟ್ರೋಲ್ ಪಂಪ್ ವಿಷಯ ಇದೆ ಏಕೆ ನೀವು ಇದನ್ನು ದೊಡ್ಡದು ಮಾಡುತ್ತೀರಾ ಅಂತಾ ಹೇಳಿ ದೂರನ್ನು ತೆಗೆದುಕೊಂಡಿರುವುದಿಲ್ಲ. ನಂತರ ದಿಃ25.06.2024ರಂದು ಅದೀಕ್ಷಕರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಅವರಿಗೆ ದೂರು ನೀಡಿರುತ್ತೇನೆ. ಸದರಿಯವರು ಪೊಲೀಸ್

ಆಯುಕ್ತ ಬೆಳಗಾವಿ ಅವರಿಗೆ ನಾನು ನೀಡಿದ ಪ್ರತಿಗೆ inward and outwardನಂಬರ್ ಆಗಿ ಕಳುಹಿಸಿಕೊಟ್ಟಿರುತ್ತಾರೆ.

6. ದಿನಾಂಕಃ08.07.2024 ರಂದು ಹಿರೇಬಾಗೇವಾಡಿ ಪೊಲೀಸ್ ಠಾಣೆಯಿಂದ ನನಗೆ ಕರೆ ಬಂದಿದ್ದು, ನೀವು ನಾಳೆ 09ನೇ ತಾರೀಖಿಗೆ ಠಾಣೆಗೆ ಬರಬೇಕೆಂದು ತಿಳಿಸಿದರು. ಮತ್ತೆ ದಿನಾಂಕಃ09.07.2024ರಂದು ಪೊಲೀಸ್ ಠಾಣೆಗೆ ಹೋಗಿದ್ದು ಅಲ್ಲಿಗೆ ಪೊಲೀಸರು ಶೀತಲ್ ಅರ್ಜುನ ದೇವಕಿ ಮತ್ತು ಪ್ರವೀಣ ಮುಕುಂದ ಕಂಗ್ರಾಳಕರ್ ಅವರನ್ನು ಠಾಣೆಗೆ ಕರೆಯಿಸಿದ್ದರು. ಆ ದಿನ ನಮ್ಮ ದೂರನ್ನು ದಾಖಲು ಮಾಡಿಕೊಳ್ಳಲಿಲ್ಲ. ದಿನಾಂಕಃ12.07.2024ರಂದು ಫಿರ್ಯಾದಿಯನ್ನು ಪೋಸ್ಟ ಮುಖಾಂತರ ಪೊಲೀಸ್ ಆಯುಕ್ತರು ಬೆಳಗಾವಿ ಹಾಗೂ ಸಚಿವರು ಗೃಹ ಇಲಾಖೆ ಅವರಿಗೆ ಕಳ ಹಿಸಿಕೊಟ್ಟಿರುತ್ತೇನೆ. ದಿನಾಂಕಃ15.07.2024ರಂದು ಸಾಯಂಕಾಲ 8.30ಘಂಟೆಗೆ ಮತ್ತೆ ನನಗೆ ಹಿರೇಬಾಗೆವಾಡಿ ಪೊಲೀಸ ಠಾಣೆಯಿಂದ ಫೋನ್ ಕರೆ ಬಂದಿದ್ದು ಆಗ ಜೋರಾಗಿ ಮಳೆ ಬರುತ್ತಿದೆ ನಾನು ನಾಳೆ ಪೊಲೀಸ್ ಠಾಣೆಗೆ ಬಂದು ಭೇಟಿ ಆಗುವುದಾಗಿ ತಿಳಿಸಿರುತ್ತೇನೆ. ದಿನಾಂಕಃ16.07.2024ರಂದು ಮತ್ತೆ ಪೊಲೀಸ್ ಠಾಣೆಗೆ ಹೋೀಗಿದ್ದು, ಆ ದಿನ ಸಿಪಿಐರವರು ಬಂದೋಬಸ್ತ ನಿಮಿತ್ಯ ಹೊರಗಡೆ ಹೋಗಿರುತ್ತಾರೆ. ನಾವು ಕರೆ ಮಾಡಿದಾಗ ನೀವು ಬನ್ನಿ ಅಂತಾ ಹೇಳಿ ನನನ್ನು ಅಲ್ಲಿಂದ ಕಳುಹಿಸಿಕೊಟ್ಟರು. ದಿನಾಂಕಃ21.07.2024ರಂದು ಎ.ಸಿ.ಪಿ ಆಫೀಸ್‌ನಿಂದ ಫೋನ್ ಕರೆ ಮಾಡುತ್ತಿರುವುದಾಗಿ ನೀನು 22.07.2024 ರಂದು ಠಾಣೆಗೆ ಬರಬೇಕೆಂದು ತಿಳಿಸಿದರು.

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.